# ಆಯುಕ್ತರ ಕಛೇರಿ, ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು

ನಂ.ನಅಪ್ರಾಚಿ :ಚಿಮ :ಕಾಮಗಾರಿ :ಸ೯ :ಗೃಮಂಬ.ಉ.ಅ.ಕಾ. :05 :2011 - 12. ದಿನಾಂಕ: 16 -06-2011.

## :::: ಅಲ್ಪಾವಧಿ ಟೆಂಡರ್ ಪ್ರಕಟಣೆ ::::

1 ಈ ಕೆಳಗೆ ವಿವರಿಸಿರುವ ಕಾಮಗಾರಿಗೆ 2 ನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರಿಂದ ಲಕೋಟೆಯನ್ನು ಮೊಹರು ಮಾಡಿ ಸಲ್ಲಿಸತಕ್ಕದ್ದು, **ಇ.ಎಂ.ಡಿ.** ಮತ್ತು ಗುತ್ತಿಗೆದಾರರು ಕಾಮಗಾರಿಗಳನ್ನು ವಹಿಸಿಕೊಳ್ಳುವ ಅಥವಾ ನಿರ್ವಹಿಸುವ ಸಾಮರ್ಥ್ಯದ ಬಗ್ಗೆ ವಿವರಗಳನ್ನು (ಐ.ಟಿ.ಟಿ. ನಿಯಮ –3 ಮತ್ತು 6 ರ ಪ್ರಕಾರ) ಸಲ್ಲಿಸತಕ್ಕದ್ದು, ಮೊಹರು ಮಾಡಿದ ಲಕೋಟೆಯಲ್ಲಿ ಟೆಂಡರ್ ಕಾಮಗಾರಿಯ ದರಗಳ ಪಟ್ಟಿಯನ್ನೊಳಗೊಂಡಿರುತ್ತದೆ. ಲಕೋಟೆಯಲ್ಲಿರುವ ವಿವರಗಳು ಸದರೀ ಕಾಮಗಾರಿಯನ್ನು ನಿರ್ವಹಿಸಲು ಅರ್ಹತೆ ಪಡೆದ ಗುತ್ತಿಗೆದಾರರಿಗೆ ಅಧಿನಿಯಮ 3 ರಲ್ಲಿ ನಮೂದಿಸಿರುವ ಕನಿಷ್ಟ ಅರ್ಹತೆಗಳಿದ್ದರೆ ಮಾತ್ರ ಗುತ್ತಿಗೆಯನ್ನು ವಹಿಸಬಹುದಾಗಿರುತ್ತದೆ.

2 ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ಈ ಕೆಳಗೆ ನಮೂದಿಸಿರುವ ಬೆಲೆಯನ್ನು **ಡಿ.ಡಿ** ರೂಪದಲ್ಲಿ ಯಾವುದಾದರೂ ಸ್ಥಳೀಯ ರಾಷ್ಟ್ರೀಕೃತ / ಶೆಡ್ಯೂಲ್ ಬ್ಯಾಂಕಿನಿಂದ ಪಡೆದ ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು ಇವರಿಗೆ ಪಾವತಿಯಾಗುವಂತೆ ಸಲ್ಲಿಸಿ, ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ದಿನಾಂಕ: 11-07-2011 ಆಗಿರುತ್ತದೆ, ಅರ್ಜಿ ಸಲ್ಲಿಸಿ ವಿವರಗಳುಳ್ಳ ಖಾಲಿ ಟೆಂಡರ್ ಪುಸ್ತಕಗಳನ್ನು ದ್ವಿಪ್ರತಿಯಲ್ಲಿ ಪಡೆಯಲು ದಿನಾಂಕ: 18-07-2011 ರಂದು ಕಛೇರಿಯ ವೇಳೆಯಲ್ಲಿ ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ವಿವವರಗಳಿಗೆ ಕಛೇರಿಯಲ್ಲಿ ಪಡೆಯಬಹುದಾಗಿರುತ್ತದೆ.

3 ಟೆಂಡರ್ ಜೊತೆಗೆ ನಿಗದಿತ ಇ.ಎಂ.ಡಿ. ಯನ್ನು ಈ ಕೆಳಗೆ ಅಂಕಣದಲ್ಲಿ ನಮೂದಿಸಿರುವ ಕಾಮಗಾರಿಗೆ ಅನುಗುಣವಾಗಿ ಟೆಂಡರ್‌ನ ಊರ್ಜಿತ ಅವದಿಗಿಂತ 45 ದಿವಸಗಳವರೆಗೆ ಹೆಚ್ಚುವರಿ ಅವಧಿಯನ್ನು ಹೊಂದಿರುವಂತೆ **ಡಿ.ಡಿ.** ರೂಪದಲ್ಲಿ ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು ರವರ ಹೆಸರಿನಲ್ಲಿ ಪಡೆದು ಸಲ್ಲಿಸಬೇಕು.

4 ಮೊಹರಾದ ಟೆಂಡರನ್ನು ದಿನಾಂಕ: 20-07-2011 ರಂದು ಸಂಜೆ 4.00 ಗಂಟೆಗೆ ಮುಂಚಿತವಾಗಿ ಸಲ್ಲಿಸಬೇಕು, ಸ್ವೀಕರಿಸಲಾದ ಟೆಂಡರ್‌ಗಳನ್ನು ಸಾಧ್ಯವಾದರೆ ಅದೇ ದಿನ ಸಂಜೆ 4.30 ರ ನಂತರ ಅಥವಾ ನಂತರದ ದಿನದ ಕಛೇರಿ ಕೆಲಸದ ಸಮಯದಲ್ಲಿ ಹಾಜರಿರುವ ಗುತ್ತಿಗೆದಾರರ ಅಥವಾ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ತೆರೆಯಲಾಗುವುದು.

5 ಇತರೆ ವಿವರಗಳನ್ನು ಟೆಂಡರ್‌ನ (ಕೆ.ಡಬ್ಲ್ಯೂ–1, 2, 3) ನಿಯಮಾವಳಿಯಲ್ಲಿ ನೋಡಿ ತಿಳಿಯಬಹುದಾಗಿದೆ. ಕಾಮಗಾರಿಗಳನ್ನು ಪೂರ್ಣಗೊಳಿಸುವ ಅವಧಿ 2 ತಿಂಗಳು ಮಳೆಗಾಲ ರಹಿತ ನಿಗದಿಪಡಿಸಲಾಗಿದೆ.

6 ಕಾಮಗಾರಿಗೆ ಸಂಬಂದಿಸಿದಂತೆ ಉದ್ದ ಅಗಲಗಳಲ್ಲಿ ವಿಸ್ತೀರ್ಣದಲ್ಲಿ ಮತ್ತು ಮೊತ್ತದಲ್ಲಿ ಹಾಗೂ ಉದ್ಯಾನವನಕ್ಕೆ ಅಳವಡಿಸುವ ಸಾಮಾಗ್ರಿಗಳಲ್ಲಿ ವ್ಯತ್ಯಾಸಕ್ಕೊಳಪಡುವ ಷರತ್ತಿಗೊಳಪಟ್ಟಿರುತ್ತದೆ. ಹಾಗೂ ಮೇಲೆ ತಿಳಿಸಿರುವಂತೆ ಕಾಮಗಾರಿಯ ಕ್ರಮ ಸಂಖ್ಯೆಯ ವಿವರವನ್ನು ಮತ್ತು ಹೆಚ್ಚಿನ ಮಾಹಿತಿಗಳನ್ನು ಪ್ರಾಧಿಕಾರದ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಪುಟ 2 ಕ್ಕೆ.

ಅಂಕಣ

| ಕ್ರ. ಸಂ. | ಕಾಮಗಾರಿಯ ಹೆಸರು | ಕಾಮಗಾರಿಯ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ | ಠೇವಣಿ ಮೊತ್ತ ರೂ. ಗಳಲ್ಲಿ | ಖಾಲಿ ಟೆಂಡರ್ ಫಾರಂ ಬೆಲೆ ರೂ. ಗಳಲ್ಲಿ |
|---|---|---|---|---|
| 1 | 2 | 3 | 4 | 5 |
| 1 | ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಗೃಹಮಂಡಳಿ ಬಡಾವಣೆಯ ಗಣಪತಿ ದೇವಸ್ಥಾನದ ಮುಂಭಾಗದ ಉದ್ಯಾನವನವನ್ನು ನಿರ್ಮಾಣ ಮಾಡಿ ಅಭಿವೃದ್ಧಿಪಡಿಸುವ ಕಾಮಗಾರಿ. | 9.90 | 24750.00 | 1500.00 |

**ನಿಬಂಧನೆಗಳು :-**

1 ಟೆಂಡರ್ ನಿಯಮಾವಳಿಗಳಲ್ಲಿ ಕೇಳಲಾಗಿರುವ ಎಲ್ಲಾ ದಾಖಲೆಗಳನ್ನು ಗುತ್ತಿಗೆದಾರರು ಸಂಪೂರ್ಣವಾಗಿ ನೀಡತಕ್ಕದ್ದು.

2 ಉದ್ಯಾನವನ ಅಭಿವೃದ್ಧಿ ಕಾಮಗಾರಿಗೆ ಸಂಬಂದಿಸಿದಂತೆ ಪ್ರಾಧಿಕಾರದ ಲ್ಯಾಂಡ್‌ಸ್ಕೇಪಿಸ್ಟ್ ಪ್ಯಾನಲ್‌ಗೆ ಆಯ್ಕೆಯಾಗಿರುವ ಸಂಸ್ಥೆಯವರಿಗೆ ಮೊದಲ ಆದ್ಯತೆ ನೀಡಲಾಗುವುದು ಹಾಗೂ ಈ ಹಿಂದೆ ಸದರಿ ಕೆಲಸದಲ್ಲಿ ಕಾರ್ಯ ನಿರ್ವಹಿಸಿರುವ ಬಗ್ಗೆ ದೃಡೀಕರಣ ಪತ್ರ ಮತ್ತು ನಿಯಮಾವಳಿಗಳಲ್ಲಿ ಕೇಳಲಾಗಿರುವ ಎಲ್ಲಾ ದಾಖಲೆಗಳನ್ನು ಸಂಪೂರ್ಣವಾಗಿ ನೀಡತಕ್ಕದ್ದು.

3 ಟೆಂಡರ್‌ನಲ್ಲಿ ಭಾಗವಹಿಸುವ ಗುತ್ತಿಗೆದಾರರು ನಿಗಧಿತ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಿ ಪೂರ್ಣಗೊಂಡ ದಿನಾಂಕದಿಂದ 1 ವರ್ಷಗಳ ಕಾಲ ನಿರ್ವಹಣೆ ಮಾಡಬೇಕು.

4 ಉದ್ಯಾನವನ ನಿರ್ಮಾಣದ ಸ್ಥಳ ಮತ್ತು ಇತರೆ ವಿವರಗಳನ್ನು ಈ ಕಛೇರಿಯ ಸಹಾಯಕ ಇಂಜಿನಿಯರ್ ಮತ್ತು ಆಯುಕ್ತರನ್ನು ಕಛೇರಿಯ ವೇಳೆಯಲ್ಲಿ ಬೇಟಿ ಮಾಡಿ ಪಡೆಯಬಹುದಾಗಿದೆ.

( ಜೆ. ಜೆ. ಪದ್ಮನಾಭ )
ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

( ಬಿ. ಹೆಚ್. ಶ್ರೀಕಾಂತ್ ಪೈ )
ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.